# ಸಂಪಾದಕೀಯ

ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸವನ್ನು ಅವಲೋಕಿಸಿದಾಗ ಸಂಶೋಧನೆಯ ಸ್ವರೂಪದಲ್ಲಿ ನಿರಂತರವಾಗಿ ಬದಲಾವಣೆಯಾಗುತ್ತ ಬಂದಿರುವುದು ನಮ್ಮ ಅರಿವಿಗೆ ಬರುತ್ತದೆ. ಲಭ್ಯವಿರದ ಕೃತಿಗಳನ್ನು ಹುಡುಕಿ ಬೆಳಕಿಗೆ ತರುವುದು ಶೋಧ ಇತಿಹಾಸದ ಪ್ರಾರಂಭಿಕ ಘಟ್ಟದಲ್ಲಿ ಸಂಶೋಧನೆ ಎಂಬ ಅರ್ಥದಿಂದ ಗುರುತಿಸಲಾಗುತ್ತಿತ್ತು.

ಲಭ್ಯವಿರದ ಸಾಮಗ್ರಿಯನ್ನು ಬೆಳಕಿಗೆ ತರುವುದನ್ನು ಕೂಡ ಸಂಶೋಧನೆ ಎಂಬ ದೃಷ್ಟಿಯಿಂದ ಪರಿಗಣಿಸಲಾಗುತ್ತಿತ್ತು. ಆಕರ ಸಾಮಗ್ರಿ ಸಂಗ್ರಹದ ಹಂತದಲ್ಲಿ ಸಂಶೋಧನೆಯ ವ್ಯಾಖ್ಯಾನ ಆ ನೆಲೆಯಲ್ಲಿತ್ತು. ಗ್ರಂಥ ಸಂಪಾದನೆಯ ಹಂತ ಅದಾಗಿತ್ತು.

ಸಂಶೋಧನೆಯ ಸ್ವರೂಪವನ್ನು ವಿವರಿಸುವಾಗ ಎಂ. ಎಂ ಕಲಬುರಗಿಯವರು ಅನ್ವೇಷಣೆ ಹಾಗೂ ಅವಿಷ್ಕರಣ ಎಂಬ ಪರಿಕಲ್ಪನೆಗಳನ್ನು ಬಳಸುತ್ತಾರೆ.

"ಅನ್ವೇಷಣೆ" ಎಂಬ ಪರಿಕಲ್ಪನೆಯನ್ನು ಸಾಮಾನ್ಯವಾಗಿ ಅಸ್ತಿತ್ವದಲ್ಲಿರುವ ಹಾಗೂ ಮರೆಯಲ್ಲಿರುವ ಸಂಗತಿಗಳನ್ನು ಬೆಳಕಿಗೆ ತರುವ ಸಂಗತಿಗಳ ಕುರಿತು ಬಳಸುತ್ತಾರೆ. ಹೊಸ ಕೃತಿ, ಶಾಸನ ಮೊದಲಾದವುಗಳನ್ನು ಬೆಳಕಿಗೆ ತರುವುದನ್ನು ಈ ನಿಟ್ಟಿನಲ್ಲಿ ಉದಾಹರಿಸಬಹುದಾಗಿದೆ.

"ಅವಿಷ್ಕರಣ" ಎಂಬ ಪರಿಕಲ್ಪನೆಯನ್ನು ಮೂಲತಃವಾಗಿ ಹೊಸದಾಗಿ ಶೋಧಿಸುವಂತಹ ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರವಾಗಿ ಬಳಸುತ್ತಾರೆ.

ಸಾಹಿತ್ಯ ಕ್ಷೇತ್ರದ ಸಂಶೋಧನೆಯನ್ನು ವಿವೇಚಿಸಿದಾಗ "ಅನ್ವೇಷಣೆ" ಎಂಬ ಪರಿಕಲ್ಪನೆಯು ಅನ್ವಯಿಸುತ್ತದೆ.

ಕನ್ನಡ ಸಂಶೋಧನೆಯ ವೈಧಾನಿಕತೆಯು ಸಹಜವಾಗಿ ಕಾಲಘಟ್ಟಕ್ಕನುಸಾರವಾಗಿ ಬದಲಾವಣೆಗೊಳ್ಳುತ್ತ ಬರುತ್ತಿದೆ. ಆಕರ ಸಾಮಗ್ರಿ ಸಂಗ್ರಹದ ಹಂತದ ನಂತರ ಲಭ್ಯ ಪಠ್ಯ ಕೃತಿಗಳನ್ನಾಧರಿಸಿ ಒಟ್ಟಾರೆ ಪಠ್ಯದ ವಿಶ್ಲೇಷಣೆ, ಅದರ ರಚನಾಕಾರರು, ಕಾಲ ಘಟ್ಟ, ಸಮಕಾಲೀನ ರಾಜಕೀಯ ಸಂದರ್ಭ ಸೇರಿದಂತೆ ಒಟ್ಟಾರೆ ಅಧ್ಯಯನಕ್ಕೆ ಪ್ರಾರಂಭಿಕ ಕಾಲ ಘಟ್ಟದಲ್ಲಿ ಒತ್ತು ನೀಡಲಾಗಿತ್ತು. ಇದು ಸ್ಥೂಲ ಅಧ್ಯಯನಕ್ಕೆ ಆದ್ಯತೆ ನೀಡಿದ ಘಟ್ಟವಾಗಿತ್ತು. ತದನಂತರದಲ್ಲಿ ಪರಿಕಲ್ಪನೆಯಾಧಾರಿತ ಅಧ್ಯಯನಗಳೆಡೆಗೆ ಕನ್ನಡ ಸಂಶೋಧನೆಯ ದಿಕ್ಕು ಹೊರಳಿತು.

ವಿವಿಧ ಜ್ಞಾನ ಶಿಸ್ತುಗಳ ಮಧ್ಯೆ ಅನುಸಂಧಾನ ಸಹಜವಾಗಿರುವ ಇಂದಿನ ಸಂದರ್ಭದಲ್ಲಿ ಅಂತರ್ ಶಿಸ್ತೀಯ ಹಾಗೂ ಬಹು ಶಿಸ್ತೀಯ ಸಂಶೋಧನೆಗಳಿಗೆ ಆದ್ಯತೆ ದೊರೆತಿದೆ.

ಅನುವಾದಿತ ಕೃತಿಗಳ ಅಧ್ಯಯನಗಳು ಭಾಷಿಕ ಕೊಡು - ಕೊಳ್ಳುವಿಕೆಗೆ ಸಹಕಾರಿಯಾಗಿವೆ. ತಂತ್ರಜ್ಞಾನದ ಸಹಾಯ ಹಾಗೂ ಇ ಪುಸ್ತಕಗಳ ಸ್ವರೂಪದಲ್ಲಿ ಇಂದು ವ್ಯಾಪಕವಾಗಿ ಲಭ್ಯವಿರುವ ಆಕರ ಸಾಮಗ್ರಿಗಳು ಸಂಶೋಧನಾ ಚಟುವಟಿಕೆಗಳಿಗೆ ಸಹಕಾರಿಯಾಗಿವೆ.

ಅಂತರ್ ಶಿಸ್ತೀಯ ಲೇಖನಗಳ ರಚನೆಯ ಕಡೆಗೂ ಸಂಶೋಧಕರು ಪ್ರಯತ್ನಿಸುತ್ತಿರುವುದು ಗಮನಾರ್ಹ ಅಂಶ. ಪತ್ರಿಕೆಯ ಪ್ರಸ್ತುತ ಸಂಚಿಕೆಯು ವೈವಿಧ್ಯಮಯ ಲೇಖನಗಳಿಂದ ಕೂಡಿದ್ದು, ಇಲ್ಲಿಯ ಲೇಖನಗಳನ್ನು ಸಹೃದಯಿ ಸಾಹಿತ್ಯ ಬಂಧುಗಳು ಓದಿ ಪ್ರತಿಕ್ರಿಯಿಸಬೇಕೆಂದು ನಮ್ಮ ಮನವಿ.

ತಮ್ಮ ರಚನಾತ್ಮಕ ಸಲಹೆ- ಸೂಚನೆಗಳಿಗೆ ಸದಾ ಸ್ವಾಗತ.

ಡಾ.ವಿವೇಕಾನಂದ ಸಜ್ಜನ